**ಸಾಕ್ಷಿಯನ್ನು ದಿನಾಂಕ 19.02.2026 ರಂದು ಕರೆಸಿ ಪ್ರಮಾಣವಚನ ಭೋದಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ ಆರೋಪಿಯ ಪರ ವಕೀಲರಿಂದಃ-**

ದಿನಾಂಕಃ 23.07.2024ರಂದು ಆರೋಪಿ ಚೆಕ್ ಅನ್ನು ಕೊಟ್ಟರು. ಚೆಕ ಅನ್ನು ಅದೇ ದಿನ ನಗದೀಕರಣಕ್ಕೆ ಸಲ್ಲಿಸಿದೆ. ಚೆಕ್ ಅನ್ನು ನೀಡಿ ಅಮೌಂಟ್ ಇದೆ, ಹಾಕಿಕೊಳ್ಳಿ ಎಂದು ತಿಳಿಸಿರುತ್ತಾರೆ. ನಗದೀಕರಣಕ್ಕೆ ಸಲ್ಲಿಸಿದಾಗ ಅಮೌಂಟ್ ಇಲ್ಲ ಎಂದು ಚೆಕ್ ಬೌನ್ಸ್ ಆಗಿರುತ್ತದೆ. ಬ್ಯಾಂಕಿನವರು ಸದರಿ ಸಂಬಂಧ ಎಂಡಾರ್ಸ್ ಮೆಂಟ್ ಕೊಟ್ಟಿರುತ್ತಾರೆ. ಯಾವ ದಿನಾಂಕ ಕೊಟ್ಟರು ಎಂದು ಸರಿಯಾಗಿ ನೆನಪಿಲ್ಲ. ಸದರಿ ಬ್ಯಾಂಕ್ ಎಂಡಾರ್ಸ್ ಮೆಂಟ್ ನಲ್ಲಿ ಸಹಿ ಮಿಸ್ ಮ್ಯಾಚ್ ಆಗಿದೆ ಎಂದು ತಿಳಿಸಿರುತ್ತಾರೆ. ಸಹಿ ಮಿಸ್ ಮ್ಯಾಚ್ ಆಗಿದೆ ಎಂಬುದರ ಬಗ್ಗೆ ನಮ್ಮ ವಕೀಲರು ನೋಟೀಸಿನಲ್ಲಿ ಅಥವಾ ಪಿರ್ಯಾದಿಯಲ್ಲಿ ಹಾಗೂ ನನ್ನ ಮುಖ್ಯವಿಚಾರಣಾ ಪ್ರಮಾಣ ಪತ್ರದಲ್ಲಿ ತಿಳಿಸಿರಬಹುದು ನನಗೆ ಗೊತ್ತಿಲ್ಲ. ಸದರಿ ವಿಚಾರವು ಮೇಲೆ ಯಾವುದರಲ್ಲೂ ಸಹ ತಿಳಿಸಿಲ್ಲ ಎಂದರೆ ಅಷ್ಟು ಗೊತ್ತಿಲ್ಲ. ಅವುಗಳನ್ನು ಓದಿ ಸದರಿ ವಿಚಾರವನ್ನು ಹೇಳಿದ್ದಾರೋ ಇಲ್ಲವೋ ಎಂದು ನನಗೆ ಓದಿ ಹೇಳಲು ಆಗುವುದಿಲ್ಲ.

7. ಬ್ಯಾಂಕ್ ಎಂಡಾರ್ಸ್ ಮೆಂಟ್ ಬಂದ ನಂತರ ಏನು ಮಾಡಬೇಕು ಎಂದು ನನಗೆ ಗೊತ್ತಾಗಲಿಲ್ಲ, ಅವರು ಇವರನ್ನು ಕೇಳಿದಾಗ ವಕೀಲರನ್ನು ಭೇಟಿ ಮಾಡಿ ಎಂದು ತಿಳಿಸಿರುತ್ತಾರೆ. ವಕೀಲರನ್ನು ಭೇಟಿ ಮಾಡಿದೆ, ಅವರು ಆರೋಪಿಗೆ ನೋಟೀಸನ್ನು ಕಳಿಸಿರುತ್ತಾರೆ. ನೋಟೀಸನ್ನು ದಿನಾಂಕಃ 30.07.2024ರಂದು ಕಳಿಸಿದೆವು. ಅದನ್ನು ತಯಾರು ಮಾಡಲು ನಾನೇ ಮಾಹಿತಿ ಕೊಟ್ಟೆ. ನೋಟೀಸಿನಲ್ಲಿ ಇರುವ ವಿಚಾರ ನನಗೆ ಗೊತ್ತು. ನೋಟೀಸಿಗೆ ನಾನು ಸಹಿ ಮಾಡಿಲ್ಲ. ಯಾವ ದಿನಾಂಕದಂದು ಆರೋಪಿಗೆ ನೋಟೀಸು ತಲುಪಿದೆ ಎಂದು ನನಗೆ ಗೊತ್ತಿಲ್ಲ.

8. ನಿ.ಪಿ.1ರಲ್ಲಿ ಇರುವ ಒಕ್ಕಣಿಗೆಗಳ ಬರವಣಿಗೆಗೂ ಹಾಗೂ ಶಾಯಿಗೂ ಮತ್ತು ಸಹಿಯ ಬರವಣಿಗೆ ಮತ್ತು ಶಾಯಿಗೂ ವ್ಯತ್ಯಾಸ ಇದೆ ಎಂದರೆ ಅದು ನನಗೆ ಗೊತ್ತಿಲ್ಲ, ಅವರು ಬೇಕಂತಲೇ ಮಾಡಿ ತಂದು ಕೊಟ್ಟಿರಬಹುದು. ದಿನಾಂಕ 05.03.2024ರಂದು ಸಾಲದ ಕರಾರು ಪತ್ರವನ್ನು ಬರೆದುಕೊಟ್ಟಿರುತ್ತಾರೆ. ಸದರಿ ದಾಖಲೆಗಳಲ್ಲಿ ಇರುವ ವಿಚಾರ ತಿಳಿದುಕೊಂಡಿದ್ದೇನೆ, ಆದರೆ ಕನ್ನಡ ಓದಲು ನನಗೆ ಸರಿಯಾಗಿ ಬರುವುದಿಲ್ಲ. ಮಕ್ಕಳ ಮುಖಾಂತರ ಓದಿ ತಿಳಿದುಕೊಂಡಿದ್ದೇನೆ. ಹಣವನ್ನು ಯಾವ ದಿನಾಂಕ ಆರೋಪಿಗೆ ಕೊಟ್ಟಿದ್ದೇನೆ ಎಂದು ದಾಖಲೆಗಳಲ್ಲಿ ಇದೆ, ನಾನು ಮರೆತುಹೋಗಿದ್ದೇನೆ. 2023ರಿಂದ ಹಣ ಕೊಡುತ್ತಾ ಬಂದಿದ್ದೇನೆ. ಒಂದು ಬಾರಿ ರೂ.90,000/-, ರೂ.1,00,000/-, ರೂ.40,000/- ಎರಡು ಬಾರಿ ಕೊಟ್ಟಿರುತ್ತೇನೆ. ನಂತರವೂ ಹತ್ತು ಲಕ್ಷದವರೆಗೂ ಹಣವನ್ನು ಕೊಟ್ಟಿದ್ದೇನೆ, ದಿನಾಂಕಗಳು ನಿಖರವಾಗಿ ನೆನಪಿಲ್ಲ. ಸದರಿ ವಿಚಾರವನ್ನು ಸಾಲದ ಕರಾರು ಪತ್ರದಲ್ಲಿ ಬರೆಸಿದ್ದೇನೆ. ಸದರಿ ವಿಚಾರವನ್ನು ನೋಟೀಸಿನಲ್ಲಿ ಅಥವಾ ಪಿರ್ಯಾದಿಯಲ್ಲಿ ಹಾಗೂ ನನ್ನ ಮುಖ್ಯವಿಚಾರಣಾ ಪ್ರಮಾಣ ಪತ್ರದಲ್ಲಿ ತಿಳಿಸಿರಬಹುದು ನನಗೆ ಗೊತ್ತಿಲ್ಲ.

9. ಆರೋಪಿ ನನಗೆ ಹಣವನ್ನು ಕೊಟ್ಟಿದ್ದಾರೆ. ಹಣವನ್ನು ಕೊಟ್ಟಿದ್ದಾರೆ ಹಣವನ್ನು ತೆಗೆದುಕೊಂಡಿದ್ದಾರೆ. ಫೋನ್ ಪೇ ಮಾಡಿದ್ದಾರೆ ಎಷ್ಟು ಹಣ ಎಂದು ಮರೆತಿದ್ದೇನೆ. ನಗದು ರೂಪದಲ್ಲಿ ರೂ.30,000/- ಮತ್ತು ರೂ.40,000/- ಕೊಟ್ಟಿದ್ದಾರೆ ಮತ್ತು ಚೀಟಿ ದುಡ್ಡನ್ನು ಪ್ರತ್ಯೇಕವಾಗಿ ರೂ.50,000/- ಕೊಟ್ಟಿದ್ದಾರೆ. ಹಣವನ್ನು ಕೊಟ್ಟಿರುವ ಬಗ್ಗೆ ನೋಟೀಸಿನಲ್ಲಿ ಅಥವಾ ಪಿರ್ಯಾದಿಯಲ್ಲಿ ಹಾಗೂ ನನ್ನ ಮುಖ್ಯವಿಚಾರಣಾ ಪ್ರಮಾಣ ಪತ್ರದಲ್ಲಿ ತಿಳಿಸಿದ್ದೇನೋ ಇಲ್ಲವೋ ನೆನಪಿಲ್ಲ. ಸದರಿ ವಿಚಾರವನ್ನು ನಾನು ತಿಳಿಸಿಲ್ಲ ಎಂದರೆ ಗೊತ್ತಿಲ್ಲ. ನಾನು ಈ ಪ್ರಕರಣವನ್ನು ಚೆಕ್ ಬೌನ್ಸ್ ಕೇಸು ಹಾಕಿದ್ದೇನೆ. ಹತ್ತು ಲಕ್ಷ ಚೆಕ್ ಬೌನ್ಸ್ ಆಗಿದೆ ಎಂದು ಈ ಪ್ರಕರಣ ಹಾಕಿದ್ದೇನೆ. ಆರೋಪಿಗೆ ನಗದು ರೂಪದಲ್ಲಿ ಎಷ್ಟು ಹಣ ಕೊಟ್ಟೆ ಎಂದು ಗೊತ್ತಿಲ್ಲ. ಫೋನ್ ಪೇ ಮುಖಾಂತರ ಎಷ್ಟು ಹಣ ಕೊಟ್ಟಿದ್ದೆ ಎಂದು ದಾಖಲೆಗಳಲ್ಲಿ ಇವೆ, ನನಗೆ ಈಗ ಅಷ್ಟೊಂದು ನೆನಪಿಲ್ಲ. ಸಾಲದ ಕರಾರು ಪತ್ರವನ್ನು ಆರೋಪಿಯೇ ಮಾಡಿಸಿಕೊಂಡು ಅವರೇ ಸಾಕ್ಷಿಗಳ ಸಹಿಗಳನ್ನು ಮಾಡಿಸಿಕೊಂಡು ಬಂದಿರುತ್ತಾರೆ. ಸಾಕ್ಷಿಗಳು ಯಾರು ಎಂದು ನನಗೆ ಗೊತ್ತಿಲ್ಲ. ಸಾಕ್ಷಿಗಳು ನನ್ನ ಸಮಕ್ಷಮದಲ್ಲಿ ದಾಖಲೆಗಳಿಗೆ ಸಹಿ ಮಾಡಿಲ್ಲ. ಸಾಲದ ಕರಾರು ಪತ್ರಕ್ಕೆ ನಾನು ಸಹಿ ಮಾಡಿದ್ದೇನೆ. ದಿನಾಂಕಃ05.03.2024ರಂದು ಸಹಿ ಮಾಡಿದೆ. ಆರೋಪಿಯು ಸಹ ಅದೇ ದಿನದಂದು ಸಹಿ ಮಾಡಿದರು. ಸಾಲದ ಕರಾರು ಪತ್ರವನ್ನು ಆರೋಪಿಯೇ ತಯಾರು ಮಾಡಿಸಿಕೊಂಡು ಬಂದಿರುತ್ತಾರೆ. ಅದನ್ನು ತಯಾರು ಮಾಡುವಾಗ ನಾನು ಇರಲಿಲ್ಲ. ಎಷ್ಟು ವಾಯಿದೆ ಒಳಗೆ ಹಣ ಕೊಡಬೇಕು ಎಂದು ದಾಖಲೆಗಳಲ್ಲಿ ತಿಳಿಸಿರುತ್ತಾರೆ ಎಂದು ನನಗೆ ನೆನಪಿಲ್ಲ.

10. ಆರೋಪಿ ನನ್ನೊಂದಿಗೆ ಯಾವುದೇ ಬಡ್ಡಿ ವ್ಯವಹಾರ ಮಾಡಿಲ್ಲ. ಸಾಲದ ಕರಾರು ಪತ್ರದಲ್ಲಿ ಶೇಕಡಾವಾರು 2 ರಂತೆ ಬಡ್ಡಿ ಕೊಡುತ್ತಿದ್ದೇವೆ ಎಂದು ಬರೆದಿದೆ ಎಂದರೆ ಗೊತ್ತಿಲ್ಲ. ಪ್ರಾಮಿಸರಿ ನೋಟನ್ನು ಸಹ ನನ್ನ ಸಮಕ್ಷಮದಲ್ಲಿ ತಯಾರು ಮಾಡಿಲ್ಲ. ಅದರಲ್ಲಿ ಏನು ಬರೆದಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ನಿ.ಪಿ. 6 ಮತ್ತು 7ಕ್ಕೆ ಆರೋಪಿ ಸಹಿ ಮಾಡಿಲ್ಲ ಎಂದರೆ ಸರಿಯಲ್ಲ. ನಿ.ಪಿ.7ಕ್ಕೆ ಯಾರು ಸಾಕ್ಷಿದಾರರು ಎಂದು ನನಗೆ ಗೊತ್ತಿಲ್ಲ. ನನಗೆ ಓದಲು ಬರುವುದಿಲ್ಲ ಆ ಕಾರಣ ನಾನು ಓದಿ ತಿಳಿದುಕೊಂಡಿಲ್ಲ. ನಮ್ಮ ಮಕ್ಕಳು ಮತ್ತು ವಕೀಲರ ಮೂಲಕ ಸಹ ಕೇಳಿ ತಿಳಿದುಕೊಂಡಿರುವುದಿಲ್ಲ.

11. 2023ರಲ್ಲಿ ನನ್ನ ಬಳಿ ಹತ್ತು ಲಕ್ಷ ಹಣ ಇತ್ತು ಎಂಬುದಕ್ಕೆ ನ್ಯಾಯಾಲಯಕ್ಕೆ ದಾಖಲೆ ಕೊಟ್ಟಿಲ್ಲ. ಆದರೆ ಇತ್ತು. ಸದರಿ ಹಣದ ಮೂಲ ಯಾವುದು ನ್ಯಾಯಾಲಯಕ್ಕೆ ತಿಳಿಸಬಹುದಾ ಎಂಬ ಪ್ರಶ್ನೆಗೆ ಮೊದಲಿನಿಂದ ಸಂಪಾದನೆ ಮಾಡಿ ಸೈಟು ಖರೀದಿ ಮಾಡಿ ಮನೆ ಕಟ್ಟಲು ಇಟ್ಟುಕೊಂಡಿದ್ದೆ. ನಿ.ಪಿ. 6 ಮತ್ತು 7ರಲ್ಲಿ ಇರುವ ಸಾಕ್ಷಿದಾರರ ಮುಖಾಂತರ ನ್ಯಾಯಾಲಯದಲ್ಲಿ ಸಾಕ್ಷ್ಯವನ್ನು ಕೊಡಿಸಲು ನನಗೆ ಯಾವುದೇ ತೊಂದರೆ ಇಲ್ಲ. ನನ್ನ ಹೆಂಡತಿ ಸಹ ಆರೋಪಿಯ ಮೇಲೆ ಸಿಎಂಎಂ ಬೆಂಗಳೂರು ನ್ಯಾಯಾಲಯದಲ್ಲಿ ಚೆಕ್ ಬೌನ್ಸ್ ಪ್ರಕರಣ ಹೂಡಿರುತ್ತಾರೆ ಎಂದರೆ ಗೊತ್ತಿಲ್ಲ. ನನಗೆ ಗೊತ್ತಿರುವ ರೀತಿ ಅವರು ಯಾವ ವ್ಯವಹಾರ ಅವರೊಂದಿಗೆ ಮಾಡಿರುತ್ತಾರೆ ಎಂದು ನನಗೆ ತಿಳಿಸಿಲ್ಲ. ಆರೋಪಿ ಮತ್ತು ನನ್ನ ಹೆಂಡತಿ ಪವಿತ್ರಾ ಅವರು ಸ್ನೇಹಿತರು ಎಂದರೆ ಇರಬಹುದದು. ಆರೋಪಿ ಸುಮಾರು 12

ವರ್ಷಗಳಿಂದ ಪರಿಚಯ. ಈ ಪ್ರಕರಣ ಇದ್ದಾಗ ನನ್ನ ಹೆಂಡತಿ ಪವಿತ್ರಾ ನ್ಯಾಯಾಲಯಕ್ಕೆ ಬಂದಿದ್ದರು ಎಂದರೆ ಸುಳ್ಳು. ಈ ಪ್ರಕರಣ ಹಾಕಿರುವ ಬಗ್ಗೆ ನನ್ನ ಹೆಂಡತಿಗೆ ತಿಳಿಸಿಲ್ಲ. ನಾನು ಹಾಕಿರುವುದು ಅವರಿಗೆ ಹೇಳಿಲ್ಲ. ಅವರು ಹಾಕಿರುವುದು ನನಗೆ ಹೇಳಿಲ್ಲ.

12. ಆರೋಪಿ ಮನೆಯ ಕಡೆ ಆರ್ಥಿಕವಾಗಿ ಚೆನ್ನಾಗಿದ್ದಾರೆ ಎಂದರೆ ಹೌದು. ಆರೋಪಿಯಿಂದ ನನಾನು ಕೊಟ್ಟಿರುವ ಹಣ ವಾಪಸ್ಸು ಬಂದಿದ್ದರೂ ಈ ಸುಳ್ಳು ಪ್ರಕರಣ ಹಾಕಿದ್ದೇನೆ ಎಂದರೆ ಸರಿಯಲ್ಲ. ನಾನು ಮತ್ತು ನನ್ನ ಹೆಂಡತಿಗೆ ಎಲ್ಲಾ ವಿಚಾರ ಗೊತ್ತಿದ್ದರೂ ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ**

**2ನೇ ಎಎಸ್‌ಸಿಜೆ ಮತ್ತು ಎಸಿಜೆಎಂ,**
**ಬೆಂಗಳೂರು.**